ಹಂಪಿ ಎಕ್ಸ್‌ಪ್ರೆಸ್

ದೇವಿ ಮಹೇಶ್ವರ ಹಂಪಿನಾಯ್ಡು
1336hampiexpress1509@gmail.com

ಅಯೋಧ್ಯೆ ಮಾತ್ರವಲ್ಲ, ರಾಜ್ಯದಲೂ ಇದೆ ಶ್ರೀರಾಮನ ನೆಲೆ

ಅದು ಅಯೋಧ್ಯೆಯಲ್ಲಿ ಶ್ರೀರಾಮನ ಮಂದಿರವನ್ನು ಕೆಡವಿದ ಆ ಜಾಗದಲ್ಲಿ ಧರ್ಮಭಂಜಕರಿಂದ ನಿರ್ಮಾಣವಾದ ಬಾಬರಿ ಮಸೀದಿಯ ಧ್ವಂಸ ಆಗಿರದ ಸಂದರ್ಭ. ಸಾವಿರಾರು ಹಿಂದೂ ದೇವಾಲಯಗಳನ್ನು ನಾಶ ಮಾಡಿದ ಇಸ್ಲಾಂ ಆಕ್ರಮಣಕಾರರ ಪೈಶಾಚಿಕ ದಾಳಿ ಯನ್ನು ಹಿಂದೂಗಳು ಸಹಿಸಿಕೊಂಡೇ ಬಂದಿದ್ದರು. ಆದರೆ ಒಬ್ಬ ಮಹಾಪುರುಷನ ಅಸ್ತಿತ್ವದ ಮೇಲಾದ ಆಕ್ರಮಣವನ್ನು ಹಿಂದೂಗಳು ಸಹಿಸಿಕೊಳ್ಳಲಾಗಲೇ ಇಲ್ಲ. ಶತಮಾನಗಳಷ್ಟು ಕಾಲ ಈ ವೇದನೆಯನ್ನು ಅನುಭಸಿಕೊಂಡೇ ಬಂದಿದ್ದರು. ಹಿಂದೂಗಳಿಗೆ ತಮ್ಮ ಪುರಾಣ ವೇದ ಉಪನಿಷತ್ತು ಪೌರಾಣಿಕ ಇತಿಹಾಸ ಕ್ಕಿಂತ ರಾಮಾಯಣ ಮತ್ತು ಭಗವದ್ಗೀತೆಯೇ ಮೊದಲ ಅಸ್ಮಿತೆ ಮತ್ತು ಆತ್ಮಾಭಿಮಾನವಾಗಿತ್ತು. ರಾಮಾಯಣದ ಸಾತ್ವಿಕ ತಾತ್ವಿಕ ನೈತಿಕ ಮತ್ತು ಪ್ರಾಮಾಣಿಕ ಗುಣಗಳ ಶ್ರೀರಾಮನೇ ಮೊದಲ ಆದರ್ಶ ಪುರುಷನಾಗಿದ್ದನು. ಅಂಥ ಶ್ರೀರಾಮನ ಜನ್ಮಸ್ಥಳದಲ್ಲಿದ್ದ ಮಂದಿರವನ್ನು ಕೆಡವಿ ಅದರ ಮೇಲೆ ಸಮಾಧಿ ನಿರ್ಮಾಣವಾಗಿದ್ದನ್ನು ನಿಜವಾದ ಹಿಂದೂ ಗಳು ಸಹಿಸಿಕೊಂಡಿರಲು ಸಾಧ್ಯವೇ ಆಗಿರಲಿಲ್ಲ. ಅದೊಂದು ಹೇಳತೀರದ ಬೌದ್ಧಿಕ ಮುಖಭಂಗ ವಾಗಿಯೇ ಕಾಡುತ್ತಿತ್ತು. ಹೀಗಾಗಿ ಬಾಬರಿ ಮಸೀದಿ ಸ್ಥಳ ಹಿಂದೂಗಳಿಗೆ ಸೇರಬೇಕೆಂಬ ಅಚಲ ಸಂಕಲ್ಪದೊಂದಿಗೆ ವಿಶ್ವ ಹಿಂದೂ ಪರಿಷತ್ತು ನ್ಯಾಯಾಲಯದ ಮೆಟ್ಟಿಲೇರಿತು. ಇದರಿಂದಾಗಿ ಬಾಬರಿ ಮಸೀದಿ ಒಳಗೊಂಡಂತೆ ಸುತ್ತಮುತ್ತಲಿನ ಸ್ಥಳ ಸರಕಾರದ ಸರ್ಪಗಾವಲಿಗೆ ಒಳಪಟ್ಟಿತ್ತು. ಅದು 1990. ವಿಶ್ವ ಹಿಂದೂ ಪರಿಷತ್ತಿನ ಅಶೋಕ್ ಸಿಂಘಲ್ ಅವರೊಂದಿಗೆ ಖ್ಯಾತ ವಾಸ್ತುಶಿಲ್ಪಿ ಚಂದ್ರಕಾಂತ್ ಸೋಮಪುರ್ ಅವರು ಸರಕಾರದ ನಿಬಂಧನೆಗಳಿಗೆ ಒಳಪಟ್ಟು ಮಂದಿರವಿದ್ದ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಆಗ ಒಂದು ಅಳತೆ ಟೇಪನ್ನೂ ಕೊಂಡೊಯ್ಯ ವಂತಿರಲಿಲ್ಲ. ಆದರೂ ಅಂದಿನ 47 ವರ್ಷದ ಚಂದ್ರಕಾಂತ ಸೋಮಪುರ ಅವರು ಎಷ್ಟು ನಿಖರವಾದ ಪಂಡಿತರೆಂದರೆ ತಮ್ಮ ಹೆಜ್ಜೆಯನ್ನು ಎಣಿಸಿಯೇ ಗರ್ಭಗುಡಿಯ ವ್ಯಾಪ್ತಿ ಗುರುತಿಸಿ ಅದರ ಚಿತ್ರಣ ವನ್ನು ಮನದಲ್ಲೇ ರೂಪಿಸಿದ ಚಾಣಕ್ಷ್ಯ ವಿನ್ಯಾಸಗಾರ ರಾಗಿದ್ದರು. ಅಂದು ಅವರು ಆ ಸ್ಥಳದ ಬಳಿ ತೆರಳಿ ದಾಗಲೇ ಅಲ್ಲಿ ಧನಾತ್ಮಕ ಶಕ್ತಿಯ ಕಂಪನಗಳ ಅನುಭವವನ್ನು ಕಂಡಿದ್ದರು. ಇವರ ತಾತ ಪ್ರಭಾಕರ್ ಸೋಮಪುರ ಅವರು ಆಗಲೇ ಗುಜರಾತಿನ ಸೋಮನಾಥ ದೇಗುಲ ಮತ್ತು ಮಥುರಾ ದೇಗುಲದ ಪ್ರಮುಖ ವಾಸ್ತಶಿಲ್ಪಯಾಗಿದ್ದರು. ತಾತನಂತೆಯೇ ಇವರೂ ಸಹ ನೂರಾರು ದೇವಾಲಯದ ವಾಸ್ತುಶಿಲ್ಪಿ ಯಾಗಿ ಅನುಭವ ಗಳಿಸಿಕೊಂಡಿದ್ದಾರೆ. ಆಗಸ್ಟ್ 5ರಂದು ಭೂಮಿಪೂಜೆಗೊಳ್ಳುತ್ತಿರುವ ಶ್ರೀರಾಮನ ಮಂದಿರದ ಸಂಪೂರ್ಣ ವಾಸ್ತುಶಿಲ್ಪ ಮತ್ತು ವಿನ್ಯಾಸದ ಹೊಣೆಗಾರಿಕೆ ಇವರದೇ ಆಗಿದೆ.

ಅಲ್ಲಿಗೆ ಶತಮಾನಗಳಷ್ಟು ಕಾಲ ಹೋರಾಡಿ ಅದರಿಂದ ನಿರಾಶೆ ಹತಾಶೆ ಸಾವು ನೋವು ಅವಮಾನ ಸಂಕಟಗಳನ್ನು ಅನುಭಸಿದ ಈ ದೇಶದ ಬಹುಸಂಖ್ಯಾತ ಹಿಂದೂಗಳಿಗೆ ಇನ್ನು ಕೆಲವೇ ವರ್ಷಗಳಲ್ಲಿ ಶ್ರೀರಾಮನ ಜನ್ಮಭೂಮಿಯನ್ನು ಅಲ್ಲಿ ಭವ್ಯ ರಾಮಮಂದಿರವನ್ನು ಕಾಣುವ ಸುಯೋಗ ಒದಗಿ ಬಂದಿದೆಯೆಂದರೆ ಅದು ಶ್ರೀರಾಮನ ವನವಾಸದ ಅನುಭೂತಿ ಮತ್ತು ಈ ಕಾಲದ 'ಸುಂದರಕಾಂಡ'ದ ಆರಂಭವೆಂದೇ ಹೇಳಬಹುದು. ಶ್ರೀರಾಮ ಯಾವು ದೇ ತಪ್ಪು ಮಾಡಿದವರಲ್ಲ. ಅನ್ಯರ ಸ್ವಾರ್ಥಕ್ಕಾಗಿ ಇಡೀ ರಾಜ್ಯವನ್ನು ತ್ಯಜಿಸಿ ಪಿತೃವಾಕ್ಯ ಪರಿಪಾಲಕನಾಗಿ ವನವಾಸ ಅನುಭವಿಸಿ ರಾವಣನ ಅವೇಕ ಮತ್ತು ಅಹಂಕಾರದಿಂದಾಗಿ ಯುದ್ಧಕ್ಕೆ ನಿಂತು ಧರ್ಮವನ್ನು ಎತ್ತಿಹಿಡಿದ ಮಹಾಪುರುಷ. ಇಂಥ ಶ್ರೀರಾಮನ ಜನ್ಮಭೂಮಿಯಲ್ಲೇ ಇಂದು ದೇಗುಲ ನಿರ್ಮಾಣವಾಗುತ್ತಿರುವುದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡಬೇಕಾದ ವಿಚಾರ. ಈಗಾಗಲೇ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿಥ್ಯನಾಥ ಅವರು ಅಯೋಧ್ಯೆಯ ಪ್ರತಿ ಮನೆಯಲ್ಲೂ ಅಂದು ದೀಪವನ್ನು ಬೆಳಗಲು ಆದೇಶಿಸಿದ್ದಾರೆ. ಆದರೆ ಅಂದು ಇಡೀ ಭಾರತದ ದೇಶವಾಸಿಗಳು ದೀಪವನ್ನು ಬೆಳಗಿ ಸಂಭ್ರಮಿಸುವುದು ಸಹಜ ಮತ್ತು ಹೆಮ್ಮೆ.

ಇಷ್ಟಕ್ಕೂ ಶ್ರೀರಾಮ ಅಯೋಧ್ಯೆಗೆ ಮಾತ್ರ ಸೀಮಿತವೇ? ಅಯೋಧ್ಯೆ ಬಾಲಕಾಂಡದಿಂದ ವಾಪಸ್ಸು ಉತ್ತರಕಾಂಡಕ್ಕೆ ಮರಳುವ ಮಧ್ಯೆ ಶ್ರೀರಾಮನ ಪಾದಸ್ಪರ್ಶ ಕಂಡ ಸ್ಥಳಗಳಾವುದು ಎಂದು ನೋಡುತ್ತಾ ಬಂದರೆ ಇಡೀ ರಾಮಾಯಣದ ಪ್ರಮುಖ ಕಾಂಡ ವಾದ ಕಿಷ್ಕಿಂದಾಕಾಂಡವು ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಆ ಕಿಷ್ಕಿಂದಾಕಾಂಡ ನಡೆದ ಪುಣ್ಯಭೂಮಿಯೇ ಇಂದಿನ ಹಂಪಿಯ ತುಂಗಭದ್ರ ನದಿತೀರ. ಶಿವ ಕೈಲಾಸ ತೊರೆದು ಹಂಪಿಯ ಹೇಮ ಕೂಟದಲ್ಲಿ ಕಠಿಣ ತಪಸ್ಸಿಗೆ ಕೂತು, ಪಾರ್ವತಿದೇವಿ ಯಜ್ಞಕುಂಡದಲ್ಲಿ ಬಿದ್ದು (ಪಂಪಾ) ಹಂಪಿಯಲ್ಲಿ ಪಂಪಾದೇವಿಯಾಗಿ ಜನಿಸಿ, ಶಿವನ ತಪೋಭಂಗವಾಗಿ ಮನ್ಮಥನನ್ನು ದಹಿಸಿ, ನಂತರ ಪಂಪಾಕಲ್ಯಾಣ ಜರುಗಿ ಕುಮಾರಸ್ವಾಮಿಯ ಜನನವಾಗಿ ತಾರಕಾಸುರನ ಸಂಹರಿಸಿದ (ಸ್ಕಂದ ಪುರಾಣ) ಪುರಾಣವನ್ನು ಹಂಪಿ ಹೊಂದಿದೆ. ಇಂಥ ಪುಣ್ಯಕ್ಷೇತ್ರವನ್ನು ತ್ರೇತಾಯುಗ ದಲ್ಲಿ ಶ್ರೀರಾಮ ವನವಾಸಿಯಾಗಿ ಪ್ರವೇಶಿಸಿಸು ತ್ತಾರೆ. ಇಲ್ಲಿನ ವಾನರ ಸಾಮ್ರಾಜ್ಯವಾದ ಕಿಷ್ಕಿಂದಾದಲ್ಲಿ ಉಳಿದುಕೊಂಡು ತನ್ನ ಚಾತುರ್ಮಾಸವನ್ನು ಕಳೆಯು ತ್ತಾರೆ. ಹಾಗೆ ಚಾತುರ್ಮಾಸವನ್ನು ಕಳೆದ ಸ್ಥಳವೇ ಇಂದಿನ ಮಾಲ್ಯವಂತ (ಮಾಲ್ಯವಂತ ಋಷಿ) ಪರ್ವತ. ಅದು ಶ್ರೀರಾಮ ತಂಗಿದ ಸ್ಥಳವಾದ್ದರಿಂದ 'ಮೌಲ್ಯವಂತ ಶ್ರೀರಘುನಾಥಸ್ವಾಮಿ ಪರ್ವತ' ಎಂದೂ ಕರೆಯಲಾಗುತ್ತದೆ. ಹೀಗೆ ಶ್ರೀರಾಮ ತನ್ನ ವನವಾಸದಲ್ಲಿ ಎಲ್ಲಿಯೂ ಇಷ್ಟೊಂದು ಅಂದರೆ ನಾಲ್ಕು ತಿಂಗಳು ಒಂದೇ ಕಡೆ ನೆಲೆಗೊಂಡಿದ್ದು ಇಲ್ಲವೇ ಇಲ್ಲ ಎಂಬುದು ಪ್ರತೀತಿ. ಮುಂದೆ ತನ್ನ ಚಾತುರ್ಮಾಸದ ಆಚರಣೆಯಲ್ಲಿ ಹಂಪಿಯ ಅದಿದೈವ ಶ್ರೀಪಂಪಾ ವಿರೂಪಾಕ್ಷ ದೇವರನ್ನು ಆರಾಧಿಸುತ್ತಾ, ಮುಂದೆ ಸೀತಾಮಾತೆಯನ್ನು ಹುಡುಕುವ ಪ್ರಯತ್ನಕ್ಕೆ ಜಯ ಸಿಗಲೆಂದು ಪ್ರಾರ್ಥಿಸುತ್ತಾರೆ. ಹಾಗೆಯೇ ಕಿಷ್ಕಿಂದೆಯ ರಾಜ ಸುಗ್ರೀವನು ಶ್ರೀರಾಮನ ಮುಂದೆ ಸಮಸ್ತ ವಾನರರನ್ನು ಸಭೆ ಸೇರಿಸಿ 'ಸೀತಾ ಮಾತೆಯನ್ನು ಕರೆ ತರಲು ವಾನರೆಲ್ಲರೂ ಎಂಥಹ ತ್ಯಾಗಕ್ಕೂ ಸಿದ್ಧವಾಗಿರಬೇಕು ಇಲ್ಲದಿದ್ದರೆ ಅಂಥವರ ತಲೆ ಕಡಿಯಲಾಗುತ್ತದೆ' ಎಂಬ 'ಸುಗ್ರಿವಾಜ್ಞೆ' ಹೊರಡಿಸುತ್ತಾನೆ. ಅಷ್ಟೇ ಅಲ್ಲಾ, ಶ್ರೀರಾಮ ಅಯೋಧ್ಯೆಯನ್ನು ಬಿಟ್ಟ ಕೆಲವೇ ದಿನಗಳಲ್ಲಿ ರಾಜ ದಶರಥರು ಮರಣಹೊಂದುತ್ತಾರೆ. ಹೀಗಾಗಿ ರಾಮ ಹಂಪಿಯಲ್ಲೇ ತನ್ನ ತಂದೆಗೆ ಪಿತೃ ತರ್ಪಣ ಅರ್ಪಿಸಿದರೆಂದೂ ಹೇಳಲಾಗುತ್ತದೆ. ಹೀಗಾಗಿ ಇಂದಿಗೂ ತುಂಗಭದ್ರ ತಟದಲ್ಲಿ ತಮ್ಮ ಮಾತಾಪಿತೃಗಳಿಗೆ ತರ್ಪಣ ಶಾಸ್ತ್ರ ನೆರವೇರಿಸಲು ದೇಶದೇಶಗಳಿಂದ ಆಗಮಿಸುತ್ತಾರೆ.

ಶ್ರೀರಾಮನಿಗಾಗಿ ದಶಕಗಳ ಕಾಲ ಕಾದು ಕೊನೆಗೂ ಅವರನ್ನು ಪ್ರತ್ಯೇಕ್ಷವಾಗಿ ಕಣ್ತುಂಬಿಕೊಂಡ ಶಬರಿಯ ವಾಸಸ್ಥಳವೂ ಇಂದು ಹಂಪಿಯಲ್ಲಿ ಗುರುತಿಸಲ್ಪಟ್ಟಿದೆ. ಮುಂದೆ ಶ್ರೀರಾಮ ಹನುಮರ ಭೇಟಿಯಾಗಿ ಅವರ ಜತೆ ಸುಗ್ರೀವ ನಾಯಕತ್ವದ ಅಂಗಧ ಒಳಗೊಂಡ ವಾನರಸೇನೆ ತಮಿಳುನಾಡಿನ ರಾಮೇಶ್ವರಂನತ್ತ ತೆರಳು ತ್ತದೆ. ಇದು ರಾಮಾಯಣದ ಕಿಷ್ಕಿಂದಾಕಾಂಡದ ಪ್ರಸಂಗಗಳಾಗಿದ್ದರೆ ಇದನ್ನು ಅರಿತ ಜಯನಗರ ಸಾಮ್ರಾಜ್ಯದ ಅರಸರು ರಾಮಾಯಣವನ್ನು ಸಾಕ್ಷೀಕರಿಸುವುದಕ್ಕೆ ಹೆಚ್ಚು ಮಹತ್ವ ನೀಡುತ್ತಾರೆ. ಜಯನಗರ ಸಾಮ್ರಾಜ್ಯದ ಆರಂಭದಿಂದಲೇ ಎಲ್ಲೆಂದ ರಲ್ಲಿ ಹನುಮನ ಮೂರ್ತಿಯ ಕೆತ್ತನೆಗಳನ್ನು ಕಾಣಬಹುದಾಗಿದೆ. ಸುವರ್ಣಯುಗ ಕಂಡ ಶ್ರೀಕೃಷ್ಣದೇವ ರಾಯನ ಅವಧಿಯಲ್ಲಿ ನಿರ್ಮಿಸದ್ದೆನ್ನಲಾಗುವ ಮೌಲ್ಯವಂತ ರಘುನಾಥ ಬೃಹತ್ ದೇವಾಲಯದ ಗರ್ಭಗುಡಿಯಲ್ಲಿರುವ ಶ್ರೀರಾಮನ ಮೂರ್ತಿಯ ಶೈಲಿ ಇಡೀ ಜಗತ್ತಿನಲ್ಲಿ ಎಲ್ಲೂ ಕಾಣಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಶ್ರೀರಾಮ ಸೀತೆ ಲಕ್ಷ್ಮಣರೊಂದಿಗೆ ನಿಂತಿರುವ ಭಂಗಿಯಲ್ಲೇ ಕಾಣುತ್ತೇವೆ. ಅಥವಾ ಸಿಂಹಾಸದ ಮೇಲೆ ಕುಳಿತಿರುವ ಚಿತ್ರಣವನ್ನು ನೋಡಿರಬಹುದು. ಆದರೆ ಮಾಲ್ಯವಂತ ಪರ್ವತದ ಗುಡಿಯಲ್ಲಿ ಶ್ರೀರಾಮನ ತನ್ನ ಕಾಲುಗಳನ್ನು ಮಡಚಿ ಪದ್ಮಾಸನದಲ್ಲಿ ಕುಳಿತು, ಎಡ ಅಂಗೈಯನ್ನು ಎಡ ಮಂಡಿಯ ಮೇಲಿರಿಸಿ, ಬಲಗೈನ ಹೆಬ್ಬೆಟ್ಟು ಮತ್ತು ತೋರ್ಬೆರಳನ್ನು ಸೇರಿಸಿ ವಕ್ಷದ ಮೇಲಿರಿಸಿದ ಯೋಗ ಮುದ್ರೆಯಲ್ಲಿ ಕುಳಿತಿರುವ ಮೂರ್ತಿಯನ್ನು ಇನ್ನೆಲ್ಲೂ ಕಾಣಲು ಸಾಧ್ಯವಿಲ್ಲ. ಶ್ರೀರಾಮ ಚಾತುರ್ಮಾಸವನ್ನು ಇಲ್ಲಿ ಕಳೆದದ್ದರಿಂದ ಅದರ ಸಾಂಕೇತಿಕವಾಗಿ ಜಯನಗರದ ಅರಸರು ತಮ್ಮ ಭಿನ್ನತೆಯನ್ನು ತೋರಿದ್ದಾರೆ. ಜತೆಗೆ ಹನುಮ ಒಂದು ಕಾಲಿನ ಮಂಡಿಯೂರಿ ಕುಳಿತು ಸೀತಾಮಾತೆಯಿಂದ ಹೊತ್ತು ತಂದ 'ಚೂಡಾಮಣಿ' ಯನ್ನು ಶ್ರೀರಾಮನಿಗೆ ಅರ್ಪಿಸುತ್ತಿರುವ ಭಂಗಿಯಲ್ಲಿ ಹನುಮನ ಅಪರೂಪ ದ ಕಲಾಕೃತಿ ಮನಸೆಳೆಯುತ್ತದೆ. ಇಷ್ಟವಿಲ್ಲದೆ ಶ್ರೀರಾಮನ ಆಗಮನ ಮತ್ತು ದರುಶನವೇ ಪರಮ ಪಾವನವೆಂದು ಮುಕ್ತಿಗಾಗಿ ಕಾದು ಕುಳಿತ ಶಬರಿಯ ಮೂರ್ತಿ ರಾಮನ ಬಲಭಾಗದಲ್ಲಿ ಕಾಣಬಹುದಾಗಿದೆ. ಆದರೆ ಇಂದು ಅದನ್ನು ಸೀತಾಮಾತೆ ಎಂದು ಹೇಳಲಾಗುತ್ತಿದೆ. ಈ ಗುಡಿಯ ಪಕ್ಕದಲ್ಲೇ 'ರಾಮತೀರ್ಥ' ಎಂದು ಕರೆಯಲಾಗುವ ಎಂದೂ ಬತ್ತದ ಪುಣ್ಯಬಾವಿ ಇದೆ. ಜತೆಗೆ 'ಲಕ್ಷ್ಮಣತೀರ್ಥ' ಎಂಬ ಶಿಷ್ಟವಾದ ಬಂಡೆಯಲ್ಲಿ ಸೀಳು ಹೊಂಡವಿದೆ. ಶ್ರೀರಾಮನಿಗಾಗಿ ಲಕ್ಷ್ಮಣನು ನೀರನ್ನು ಚಿಮ್ಮಿಸಲು ಬಂಡೆಗೆ ಬಾಣವನ್ನು ಮೀಟಿದಾಗ ಬಂಡೆಯು ಸೀಳಿ ಅದರಿಂದ ನೀರು ಹರಿಯಿತು ಎಂಬ ಪೌರಾಣಿಕ ಹಿನ್ನೆಲೆ ಈ ಲಕ್ಷ್ಮಣತೀರ್ಥಕ್ಕಿದೆ. ಇದರ ಎರಡೂ ಬದಿಯಲ್ಲಿ 27 ಶಿವಲಿಂಗ ಮತ್ತು ನಂದಿ ಮೂರ್ತಿಯನ್ನು ಕೆತ್ತಲಾಗಿದೆ. ಅಲ್ಲದೆ ಶ್ರೀಕೃಷ್ಣ ದೇವರಾಯನಿಂದ ನಿರ್ಮಿತವಾದ ಹಜಾರರಾಮ ದೇವಾಲಯವನ್ನು ಪ್ರದಕ್ಷಿಣೆ ಹಾಕಿ ಬಂದರೆ ಮಕ್ಕಳಿಗೆ ಮೊಬೈಲ್ ಪುಸ್ತಕಲ್ಲದೇ ಇಡೀ ರಾಮಾಯಣದ ಚಿತ್ರಣವನ್ನು ತೋರಿಸಬಹುದಾಗಿದೆ.

ಇನ್ನು ಹಂಪಿಯಲ್ಲಿ ನಡೆಯುವ ಪಾರಂಪರಿಕ ಆಚರಣೆಗಳಲ್ಲಿ ಮಾರ್ಗಶಿರ ಮಾಸದ ಹುಣ್ಣಿಮೆಯಲ್ಲಿ ವಿರೂಪಾಕ್ಷ ಮತ್ತು ಪಂಪಾದೇವಿಯ ನಿಶ್ಚಿತಾರ್ಥ ನೆರವೇರುತ್ತದೆ. ಈ ಕಾರ್ಯದಲ್ಲಿ ವಿರೂಪಾಕ್ಷ ದೇವರ ಪರವಾಗಿ ಹಂಪಿಯ ವಿದ್ಯಾರಣ್ಯ ಮಠದ ಯತಿಗಳು ಪಾಲ್ಗೊಂಡರೆ ವಧು ಪಂಪಾದೇವಿಯ ಪರವಾಗಿ ಚಕ್ರತೀರ್ಥದಲ್ಲಿರುವ ದೇವಾಲಯದ ಕೋದಂಡ ರಾಮಸ್ವಾಮಿ ಮತ್ತು ಸೀತಾದೇವಿ ಪಾಲ್ಗೊಳ್ಳುತ್ತಾರೆ (ಅರ್ಚಕರು). ಇನ್ನು ಚೈತ್ರಮಾಸದ ಶ್ರೀರಾಮನ ಜನ್ಮದಿನವಾದ ಶ್ರೀರಾಮನವಮಿ ದಿನದಂದೇ ಹಂಪಿಯ ಬ್ರಹ್ಮರಥೋತ್ಸವ ಕಾರ್ಯಕ್ರಮಗಳು ಶುಭಾರಂಭ ಪಡೆದುಕೊಂಡು ಹುಣ್ಣಿಮೆಯ ದಿನ ವಿರೂಪಾಕ್ಷ ಮತ್ತು ಪಂಪಾದೇವಿಯರ ಕಲ್ಯಾಣೋ ತ್ಸವ ಜರಗುತ್ತದೆ. ಈ ಕಾರ್ಯಕ್ರಮದಲ್ಲಿ ವಿದ್ಯಾರಣ್ಯ ಮಠದ ಯತಿಗಳು ಮತ್ತು ಕೋದಂಡರಾಮಸ್ವಾಮಿ ಸೀತಾದೇವಿಯರು ಬೀಗರಾಗಿ ನಿಲ್ಲುವ ಶಿಷ್ಟ ಪದ್ಧತಿ ಇನ್ನೂ ಆಚರಣೆಯಲ್ಲಿದೆ. ಜಯನಗರ ಅರಸರು ತುಂಗಾಭದ್ರ ನದಿಯ ಚಕ್ರತೀರ್ಥದ ಬಳಿ ಕೋದಂಡ ರಾಮ ದೇವಾಲಯವನ್ನು ನಿರ್ಮಿಸಿ ಪ್ರತಿ ವರ್ಷ ಕ್ಕೊಮ್ಮೆ ನದಿಯ ನೀರು ಸುಮಾರು ಇನ್ನೂರು ಅಡಿಗಳಷ್ಟು ಮೇಲೆ ಉಕ್ಕಿ ಹರಿದು ಶ್ರೀರಾಮನ ಪಾದ ತೊಳೆದು ಹೋಗುವಂತೆ ಮಾಡಿದ್ದಾರೆ. ಈಗಲೂ ಹೆಚ್ಚು ಮಳೆಯಾದಾಗ ನದಿಯ ಹರಿವು ಹೆಚ್ಚಾಗಿ ಕೋದಂಡರಾಮರ ದೇಗುಲವೇ ಮುಳುಗುತ್ತದೆ. ಹೀಗೆ ಪುರಾಣ ರಾಮಾಯಣ ಐತಿಹಾಸಿಕವಾಗಿಯೂ ಶ್ರೀರಾಮನ ಸ್ಮರಣ ನಮ್ಮ ಹಂಪಿಯಲ್ಲಿ ಲೀನವಾಗಿದೆ. ಅಲ್ಲಿ ರಾಮಜನ್ಮಭೂಮಿ ಇದ್ದರೆ ಇಲ್ಲಿ ಶ್ರೀರಾಮನಿಗೆ ಮನೋಬಲ ದೈವಬಲ ಆತ್ಮಬಲವನ್ನು ತುಂಬಿದ ಮಹಾಭೂಮಿ ಹನುಮ ಜನ್ಮಭೂಮಿಯಾಗಿದೆ. ಹಂಪಿಯಿಂದಲೂ ಚಕ್ರತೀರ್ಥದ ಪತ್ರ ಕುಂಭಜಲ ತುಳಸಿ ಪತ್ರ ಮಣ್ಣನ್ನು ವಿದ್ಯಾರಣ್ಯ ಮಠದಿಂದ ಕೊಂಡೊಯ್ಯಲಾಗಿದೆ. ಕಿಷ್ಕಿಂದೆಯ ಹನುಮನ ಅಂಜನಾದ್ರಿಯಿಂದ ಇಟ್ಟಿಗೆ ರೂಪದ ಕಲ್ಲುಗಳನ್ನು ಬೆಳ್ಳಿಲೇಪಕ್ಕಾಗಿ ಅಯೋಧ್ಯೆಗೆ ಹೊಯ್ಯಲಾಗಿದೆ. ಹೀಗೆ ಅಯೋಧ್ಯೆ ಹೊರತುಪಡಿಸಿದರೆ ಶ್ರೀರಾಮನ ತಪೋಭೂಮಿಯಾಗಿ ನಮ್ಮ ನಾಡು ಪಾವನ ಗೊಂಡಿದೆ. ಮುಂದೆ ಅಯೋಧ್ಯೆಯಂತೆಯೇ ನಮ್ಮ ನಾಡೂ ಸಹ ಮಹತ್ವ ಪಡೆದುಕೊಳ್ಳುವುದರಲ್ಲಿ ಸಂದೇಹವೇ ಇಲ್ಲ.

ವಿಶೇಷವೆಂದರೆ ದೇಶದಲ್ಲಿ ಅನೇಕ ಆಕ್ರಮಣ ಮಾಡಿದ ಮೊಘಲರ ವಂಶಸ್ಥ ಯಾಕೂಬ್ ಹಬೀದುದ್ದೀನ್ ಟೂಸಿಯೇ ಮಂದಿರ ನಿರ್ಮಾಣ ಕ್ಕಾಗಿ ಚಿನ್ನದ ಇಟ್ಟಿಗೆ ನೀಡುವುದಾಗಿ ಘೋಷಿಸಿದ್ದಾನೆ. ಆದರೆ ಹಿಂದೂಗಳೇ ಇರುವ ಕೆಲ ರಾಜಕೀಯ ಪಕ್ಷದ ಗುಲಾಮರುಗಳು ಮಾತ್ರ ಭೂಮಿಪೂಜೆಯನ್ನು ಸಂಭ್ರಮಿಸಲಾಗದೆ ಕೊರಗುವಂತಾಗಿದೆ. ಜತೆಗೆ ಪೂಜೆಯನ್ನು ತಡೆಯಲು ನ್ಯಾಯಾಲಯದಲ್ಲಿ ಪ್ರಯತ್ನಿಸುತ್ತಿರುವುದು ಅವರ ವೇದನೆಯನ್ನು ಹೊರಹಾಕಿದೆ. ಮತ್ತೊಂದು ಕಡೆ ಈ ಪವಿತ್ರ ಕಾರ್ಯವನ್ನು ಕೆಡಿಸಲು ಇವರ ಬಂಧುಗಳಂತಿರುವ ಭಯೋತ್ಪಾದಕರ ಬಾಂಬ್‌ಬ್ಲಾಸ್ಟು ಹುನ್ನಾರಗಳನ್ನು ತಡೆಯುವುದೇ ಸರಕಾರಕ್ಕೆ ಒಂದು ಸವಾಲಾಗಿದೆ. ಆದರೂ ಶ್ರೀರಾಮನ ಭವ್ಯ ಮಂದಿರ ನಿರ್ಮಾಣವಾಗಿ ಅದರ ದೈವೀಶಕ್ತಿಯಿಂದ ದೇಶದಲ್ಲಿ ಹೊಸ ಪರ್ವ ಆರಂಭವಾಗಲಿ ಎಂಬುದೇ ಸಮಸ್ತ ಭಕ್ತರ ಆಸ್ತಿಕರ ಹರಕೆಯಾಗಿದೆ. ಇಂಥ ಅಮೃತ ಘಳಿಗೆ ಯನ್ನು ಕಾಣುತ್ತಿರುವ ಇಂದಿನ ತಲೆಮಾರುಗಳೇ ಧನ್ಯ.

ಇದೆಲ್ಲದರ ಹಿನ್ನೆಲೆಯಲ್ಲಿ ಅಯೋಧ್ಯೆಯಲ್ಲಿ ಮಂದಿರದ ಭೂಮಿಪೂಜೆ ನೆರವೇರುತ್ತಿದೆ. ಪಾಳುಬಿದ್ದ ಮನೆಗೆ ಸುಣ್ಣಬಣ್ಣ ಬಳಿದು ಅಲ್ಲಿ ಹೋಮಹವನಗಳನ್ನು ಮಾಡಿ ದುಷ್ಟಶಕ್ತಿಗಳನ್ನು ದೂರ ಮಾಡಿ ಹೊಸ ಜೀವನ ಆರಂಭಿಸುವಂತೆ ನಮ್ಮ ದೇಶದ ಮೇರು ಪುರುಷ ಶ್ರೀರಾಮ ಸೀತಾಮಾತೆಯ ಮಂದಿರ ನಿರ್ಮಾಣವಾಗಿ ಅದರ ಧನಾತ್ಮಕ ಶಕ್ತಿಯಿಂದ ದೇಶದೊರಗಿನ ಶತ್ರುಗಳು, ಒಳಗಿನ ದೇಶದ್ರೋಗಳು, ಭಯೋತ್ಪಾದನೆ, ಭ್ರಷ್ಟಚಾರ, ಬಡತನ, ನಿರೋದ್ಯೋಗ, ಸ್ವಾರ್ಥ ರಾಜಕೀಯ ಪಕ್ಷಗಳೆಂಬ ಸೂತಕಗಳು, ಅವರ ಅಂಧಕಾರದ ಗುಲಾಮರುಗಳು ಜತೆಗೆ ಕರೋನಾದಂಥ ಮಾರಣಾಂತಿಕ ಪೀಡೆಗಳಿಂದ ದೇಶ ತೊಳೆದು ಹೋಗಿ ನವಭಾರತ ನಿರ್ಮಾಣವಾಗಿ ಮಹಾತ್ಮ ಗಾಂಧೀಜಿ ಕಂಡ ನಿಜವಾದ 'ರಾಮರಾಜ್ಯ' ಸ್ಥಾಪನೆಗೊಂಡು ದೇಶ ಅಭಿವೃದ್ಧಿ ಅಭ್ಯುದಯ ಕಾಣಲಿ ಎಂದು ಭಾರತೀಯರಾದ ನಾವುಗಳು ಶ್ರೀರಾಮ ಹನುಮರಲ್ಲಿ ಪ್ರಾರ್ಥಿಸಬೇಕಿದೆ.

ಸಿನಿಮಾ ತೆರೆ ಹಿಂದಿನ ಸಂಗತಿಗಳು

ಅಭಿಮತ

ಸಮರ್ಥ್ ಐತಾಳ್
samarth.aithal@gmail.com

ತಾನು ಖ್ಯಾತನಾಗಬೇಕು, ಜನರ ಮಧ್ಯೆ ಮಿಂಚಬೇಕು, ಇತರರು ತನನ್ನು ಗುರುತಿಸಬೇಕು, ಐಷಾರಾಮಿ ಜೀವನವನ್ನು ನಡೆಸಬೇಕು ಎನ್ನುವುದು ಮನುಷ್ಯನ ಸಹಜವಾದ ಗುಣ ಹಾಗೂ ಕನಸು ಕೂಡ. ಕೆಲವು ಸ್ಟಾರ್ ನಟರ, ನಿರ್ದೇಶಕರ ಹಾಗೂ ಇನ್ನಿತರ ಸಿನಿಮಾ ಪ್ರಮುಖರ ವೈಭವದ ಜೀವನ ಶೈಲಿಯನ್ನು ನೋಡಿ ತಮ್ಮ ಕನಸನ್ನು ನನಸಾಗಿಸಿಕೊಳ್ಳಬಹುದು ಎಂದು ತಪ್ಪು ಕಲ್ಪನೆಯಲ್ಲಿ ಅನೇಕರು ಇರುತ್ತಾರೆ. ಇಂತಹ ತಪ್ಪು ಕಲ್ಪನೆಯಿಂದ ಸಿನಿಮಾ ಕ್ಷೇತ್ರವನ್ನು ಆಯ್ಕೆಮಾಡಿ ಪಶ್ಚಾತ್ತಾಪ ಪಟ್ಟ ಉದಾಹರಣೆಗಳು ತುಂಬಾ ಇದೆ. ಸಿನಿಮಾ ತೆರೆ ಹಿಂದಿನ ವಾಸ್ತವಗಳು ಬಹುತೇಕ ಜನರಿಗೆ ಅಪರಿಚಿತವಾಗಿದೆ. ಸಿನಿಮಾ ಶಕ್ತಿಶಾಲಿಯಾದ ಮಾಧ್ಯಮ. ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಕೂಡ ರಾತ್ರೋರಾತ್ರಿ ಖ್ಯಾತಿಯ ಶಿಖರಕ್ಕೆ ಏರಿಸಬಹುದು. ಸಕಲ ಸಂಪತ್ತಿನಿಂದ ಕೂಡಿದ ಐಷಾರಾಮಿ ಜೀವನವನ್ನು ತಂದು ಕೊಡಬಹುದು. ಹಾಗೆಯೇ ಅಷ್ಟೇ ವೇಗದಲ್ಲಿ ಬೀದಿಗೂ ತರಬಹುದು. ಅದು ಸಿನಿಮಾದ ವೈಶಿಷ್ಟ್ಯ. ಆದರೆ ಸಿನಿಮಾದಲ್ಲಿ ಗೆಲುವು ಸಾಧಿಸುವುದು ಅಂದುಕೊಂಡಷ್ಟು ಸುಲಭವಲ್ಲ, ನಾವು ಕೆಲವು ಸಿನಿಮಾ ನಟರನ್ನು ಮಾತ್ರ ನೋಡಿಕೊಂಡು ಅವರಂತೆ ಆಗಲು ಬಯಸುತ್ತೇವೆ. ಆದರೆ ಅವರು ಆ ಸ್ಥಾನಕ್ಕೆ ಏರಲು ವರ್ಷಾನುಗಟ್ಟಲೆ ಅವರು ಪಟ್ಟ ಕಷ್ಟಗಳನ್ನು ನಾವು ಗಮನಿಸುವುದೇ ಇಲ್ಲ. ಇಲ್ಲಿ ಬೇರೆ ಕ್ಷೇತ್ರಕ್ಕೆ ಹೋಲಿಸಿದರೆ, ಹಗಲು ರಾತ್ರಿಯನ್ನು ನೋಡದೆ ಸ್ವಲ್ಪ ಜಾಸ್ತಿಯೇ ಪರಿಶ್ರಮ ವಹಿಸಬೇಕು. ನೀವು ಪಟ್ಟ ಪರಿಶ್ರಮಕ್ಕೆ ಅಲ್ಪಾವಧಿಯಲ್ಲೇ ಫಲ ಸಿಗಬಹುದು ಅಥವಾ ಅನೇಕ ವರ್ಷಗಳೇ ಹಿಡಿಯಬಹುದು. ಕೊನೆಗೆ ಸಿಗದೇನೂ ಇರಬಹುದು. ಹಾಗಾಗಿ ದೃಢ ನಿಶ್ಚಯ ಹಾಗೂ ಗೆಲುವಿಗಾಗಿ ಕಾಯುವ ಸಹನೆ ಅತ್ಯಗತ್ಯ. ಎಲ್ಲಕ್ಕಿಂತ ಮಿಗಿಲಾಗಿ ಅದೃಷ್ಟವಿರಬೇಕು. ಅವಕಾಶಗಳನ್ನು ಅರಸಿಕೊಂಡು ಸಿನಿಮಾ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದವರಲ್ಲಿ ಸ್ಟಾರ್ ಪಟ್ಟ ಅಥವಾ ಗೆಲುವು ಸಿಕ್ಕಿದು ಕೆಲವರಿಗೆ ಮಾತ್ರ. ಸಿನಿಮಾ ಅದೃಷ್ಟದ ಹಾವು – ಏಣಿ ಆಟ ಎಂದು ಬಾಲಿವುಡ್‌ನ ಖ್ಯಾತ ನಟ ಅಕ್ಷಯ್ ಕುಮಾರ್ ಅವರೇ ಹೇಳಿದ್ದುಂಟು. ಸಿನಿಮಾ ಒಂದು ಹೇಗೆ ಸೋಲುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ ಎಂದು ಬಾಲಿವುಡ್‌ನ ಇನ್ನೊಬ್ಬ ನಟ ಶಾರುಖ್ ಖಾನ್ ಕೂಡ ಸಿನಿಮಾ ಸೋಲು–ಗೆಲುವುಗಳಿಗೆ ಅದೃಷ್ಟವು ಕಾರಣವಾಗುತ್ತದೆ ಎನ್ನುವ ಅರ್ಥದಲ್ಲಿ ಪರೋಕ್ಷವಾಗಿ ಹೇಳುತ್ತಾರೆ. ಇಲ್ಲಿ ರಾಜಕೀಯದ ಕುತಂತ್ರದ ಆಟಕ್ಕೂ ಏನು ಕಡಿಮೆ ಇಲ್ಲ, ಎಷ್ಟೋ ಜನ ಪ್ರತಿಭಾವಂತ ಕಲಾವಿದರು ಹೀರೋ ಆಗಬೇಕೆಂಬ ಕನಸ್ಸಿನಿಂದ ಬಂದು ಕೊನೆಗೆ ಸ್ವಜನಪಕ್ಷಪಾತ ಹಾಗೂ ಪ್ರಭಾವಿ ಸ್ಟಾರ್ ನಟರ ಹಾಗೂ ನಿರ್ದೇಶಕರ ರಾಜಕೀಯಕ್ಕೆ ಬಲಿಯಾಗಿ ಅವಕಾಶ ವಂಚಿತರಾಗಿರುವ ಬಹಳಷ್ಟು ಉದಾಹರಣೆಗಳು ನಮ್ಮ ಕಣ್ಣ ಎದುರೇ ಇದೆ. ಇದು ಕಲಾವಿದರ ವ್ಯಥೆ ಅಷ್ಟೇ ಅಲ್ಲ, ನಿರ್ದೇಶಕರ ಪಾಡು. ಹೀಗೆ ಕೆಲವು ನಿರ್ದೇಶಕರ ಹತ್ತಿರ ಪ್ರತಿಭೆ ಇದ್ದರೂ ಒಳ್ಳೆಯ ಕಥೆ ಮಾಡಿ ಚೆನ್ನಾಗಿ ಸಿನಿಮಾ ಮಾಡುವ ಸಾಮರ್ಥ್ಯವಿದ್ದರೂ ಸ್ಟಾರ್ ನಟರ ಹಾಗೂ ಇನ್ನಿತರ ಪ್ರಭಾವಿಗಳ ರಾಜಕೀಯದಿಂದ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಒಂದು ಒಳ್ಳೆಯ ಸಿನಿಮಾ ಮಾಡಲು ಆಗದೆ ಇರುವ ಉದಾಹರಣೆಗಳು ಸಾಕಷ್ಟಿವೆ. ಹಾಗಾಗಿ ರಾಜಕೀಯ ಕುತಂತ್ರವನ್ನು ಭೇದಿಸುವ ಜಾಣ್ಮೆ ಕೂಡ ಅತ್ಯಾವಶ್ಯಕ. ಸ್ಟಾರ್‌ಪಟ್ಟವನ್ನು ಗಳಿಸುವುದು ಒಂದು ಸಂಘರ್ಷಣೆಯಾದರೆ, ಆ ಪಟ್ಟದಲ್ಲಿ ತಮ್ಮನ್ನು ತಾವು ಉಳಿಸಿಕೊಳ್ಳುವುದು ಇನ್ನೊಂದು ಸಂಘರ್ಷಣೆ. ಏಕೆಂದರೆ ಅದು ಶಾಶ್ವತವಲ್ಲ. ಯಾವಾಗ ತಮನ್ನು ಬೆಳಗಿಸುವ ಸಿನಿಮಾದ ಬೆಳಕು ತನ್ನ ದಿಶೆಯನ್ನು ಬದಲಾಯಿಸುತ್ತದೆಯೋ ಆಗ ಕತ್ತಲಲ್ಲಿ ಕಳೆದು ಹೋಗುತ್ತಾರೆ. ಈ ಸಿನಿಮಾದ ಬೆಳಕು ತನ್ನ ದಿಶೆಯನ್ನು ಬದಲಾಯಿಸಿ ಬೇರೆ ಕಲಾವಿದರನ್ನು ಬೆಳಗಿಸಿದಾಗ ಒಂದು ಕಾಲದಲ್ಲಿ ತಮ್ಮ ನಟನೆಯನ್ನು ನೋಡಿ ಹರಸಿದ, ತಮ್ಮ ಡೈಲಾಗ್‌ಗಳಿಗೆ ಚಪ್ಪಾಳೆಯನ್ನು ಬಾರಿಸಿದ ಜನರೇ ಕಾಲಾಂತರದಲ್ಲಿ ಮರೆತು ಹೋಗುತ್ತಾರೆ. ಆದ್ದರಿಂದ ಐಷಾರಾಮಿ ಬಂಗಲೆಯ ವಾಸ , ದುಬಾರಿ ಕಾರುಗಳಲ್ಲಿ ಓಡಾಟ, ವಿದೇಶಿ ಪ್ರವಾಸ ಎಲ್ಲಿ ಹೋದರು ತಮ್ಮನ್ನು ಸುತ್ತುವರಿಯುವ ಜನ ಹೇಗೆ ಎಲ್ಲ ತರಹದ ವೈಭವವನ್ನು ಕಳೆದುಕೊಳ್ಳುವ ಭಯ ಅಂದರೆ ಅಭದ್ರತೆಯ ಭಯ ಸಿನಿಮಾರಂಗದ ಅನೇಕರನ್ನು ಕಾಡುತ್ತದೆ. ಇದನ್ನು ಬಾಲಿವುಡ್‌ನ ಅನೇಕ ದೊಡ್ಡ ಕಲಾವಿದರು ಕೂಡ ಒಪ್ಪಿಕೊಂಡಿದ್ದಾರೆ. ಇಲ್ಲಿ ನಿರಂತರವಾಗಿ ನಡೆಯುವ ಪೈಪೋಟಿಯಲ್ಲಿ ಸ್ವಲ್ಪ ಯಾಮಾರಿದರೂ ತಮ್ಮ ಸ್ಥಾನವನ್ನು ಇನ್ನೊಬ್ಬ ಕಲಾವಿದ ಬಂದು ಅಲಂಕರಿಸುತ್ತಾನೆ. ಅದರಲ್ಲೂ ನಿರ್ದೇಶಕನಿಗೆ ಅಭದ್ರತೆಯು ಸ್ವಲ್ಪ ಹೆಚ್ಚು ಅನಿಸುತ್ತದೆ. ಐದು ಹಿಟ್ ಸಿನಿಮಾಗಳನ್ನು ನೀಡಿ ಒಂದು ಫ್ಲಾಪ್ ನೀಡಿದರೂ ಮತ್ತೆ ಸಿನಿಮಾ ಸಿಗುವುದು ಕಷ್ಟವಾಗುತ್ತದೆ.ದೊಡ್ಡ ಸೆಲೆಬ್ರಿಟಿಯ ವೈಭವದ ಜೀವನವನ್ನು ನೋಡಿಕೊಂಡು ಅವರಂತೆ ಆಗುವ ಕನಸಿನಲ್ಲಿ ಸಿನಿಮಾರಂಗಕ್ಕೆ ಕಾಲಿಡುವ ಮುನ್ನ ಇಂತಹ ವಾಸ್ತವ ಸಂಗತಿಗಳ ಅರಿವು ಅಗತ್ಯ.

ಭಟ್ಟರ್ ಸ್ನಾಕ್

● ಶಿರಿಷ ಭಟ್, (ಇಮೇಲ್ ಮೂಲಕ)
ಭಟ್ರೇ, ನಾನು 'ಹೆದೆ ತುಂಬಿ ಹೇರಿದೆನು' ಎಂಬ ಕಾರ್ಯಕ್ರಮಕ್ಕೆ ನಿರೂಪಕನಾಗಬೇಕು ಎಂದು ನಿರ್ಧರಿಸಿದ್ದೇನೆ, ನಿಮ್ಮ ಅಭಿಪ್ರಾಯ ?
– ನೀನು ಸದ್ಯ 'ಬೆದೆ ತುಂಬಿ ಹಾರಿದೆನು' ಎಂಬ ಕಾರ್ಯಕ್ರಮಕ್ಕೆ ಲೈಟ್ ಬಾಯ್ ಆಗುವುದು ಲೇಸು !

● ಹರೀಶ ಪಾರಿಜಾತ, ಬೆಂಗಳೂರು
ಶ್ರೀನಗರ ಕಿಟ್ಟಿ ಆಗಾಗ ಇಲ್ಲಿ ಬರುತ್ತಾರಲ್ಲ ?
– ಇಲ್ಲಿ ಅವರಿಗೊಂದು ಟೆಂಟ್ ಕೊಡಲಾಗಿದೆ !

● ರವೀಂದ್ರ, ಜಾಲಿಮನೆ, ಶಿರಸಿ
ನಾನು ತೆಗೆಯುವ ಹುಡುಗಿಯರ ಮುಖದ ಫೋಟೋ ಬ್ಲರ್ ಆಗಿ ಬರುತ್ತದಲ್ಲಾ ?
– ನನಗೆ ಡೌಟು .. ನೀನು ಬೇರೆಡೆ ಫೋಕಸ್ ಮಾಡುತ್ತಿರಬೇಕು !

● ಸ್ವಾತಿ (ಇಮೇಲ್ ಮೂಲಕ)
ನಿಮ್ಮ ಜತೆ ಟೂರ್‌ಗೆ ಬರಬಹುದಾ ?
– ಭಟ್ಟರ ಜತೆ ಟೂರ್‌ಗೆ ಹೋಗಬಯಸುವವರ ಪೈಕಿ ನೀವು ಅರವತ್ತೆಂಟನೇ ಕ್ರಮಾಂಕದಲ್ಲಿದ್ದೀರಿ, ದಯವಿಟ್ಟು ನಿರೀಕ್ಷಿಸಿ !

● ಶಂಕರ ಯರಗಟ್ಟಿ, ಧಾರವಾಡ
ಭಟ್ರೇ, ದಿನಾ ನನ್ನ ಪ್ರಶ್ನೆ ಇಲ್ಲಿ ಬರಬೇಕು ಅಂದ್ರೆ, ಏನು ಮಾಡಬೇಕು ?
– ಒಳ್ಳೆಯ ಪ್ರಶ್ನೆ ಕೇಳು ಸಾಕು.. ಭಟ್ಟರಿಗೆ ಸ್ನಾಕ್ ಕೊಡಿಸಬೇಕು ಅಂತ ನನ್ನ ಹೆಸರಿನಲ್ಲಿ ಲೆಕ್ಕ ಬರೆದಿಡಬೇಡ !

● ಶ್ರೀಶೈಲ ಹಿರೇಮಠ, ದಾವಣಗೆರೆ
ಈ ಸರಕಾರದಲ್ಲಿ ಒಬ್ಬರು ಕಾಣೆಯಾಗಿದ್ದಾರಲ್ಲ ?
– ಇಲ್ಲ.. ಇಲ್ಲಾ ... ನಾನು ತೆರೆಯಮರೆಯಲ್ಲಿದ್ದೇನೆ ಕಣ್ಮುಚ್ಚಿಕೊಳ್ಳಿ ಅಂದ್ರಂತೆ ಶೋಭಕ್ಕ !

● ಬಾಲಚಂದ್ರ, ಮಾಮನಿ, ಬೈಲಹೊಂಗಲ
ಆಕಿ ಫೋನ್ ಸದಾ ಎಂಗೇಜ್ ಆಗಿರತ್ತೈತಿ, ಏನು ಮಾಡಲಿ ?
– ಚೆಕ್ ಮಾಡು .. ಒಳಬರುವ ಕರೆಗಳನ್ನು ನಿಷೇಧಿಸಿರಬಹುದಾ ?!

● ಅರುಣಾ ಬಡಿಗೇರ್, ನೆಲಮಂಗಲ
ಭಟ್ರೇ, ನೀವು ಬಲಪಂಥೀಯರಂತೆ ಹೌದಾ ?
– ಊಟಕ್ಕೆ ಕುಳಿತಾಗ ಬಲಪಂಥೀಯ, ಟಾಯ್ಲೆಟ್ಟಿನಲ್ಲಿ ಎಡಪಂಥೀಯ !

● ಮಹಾಬಲ ದತ್ತಾತ್ರಿ, ಬೆಂಗಳೂರು
ಕನ್ನಡದ ಸಾಹಿತಿಗಳು ಸುಮ್ಮನಿದ್ದಾರೆ, ಏಕೆ ?
– ಜನರಿಗೆ ಅವರಿಗಿಂತ ಕರೋನಾವೇ ವಾಸಿ ಎಂದು ಅನಿಸಿದೆಯಂತೆ !

● ಸುರೇಶ ಪಾಟೀಲ, ಬೆಳಗಾವಿ
ಕೂದಲು ಮುಡಿ ಕೊಟ್ಟರೆ ದೇವರು ಸಂತೃಪ್ತನಾಗುತ್ತಾನಂತೆ ನಿಜವಾ ?
– ಹಾಗಿದ್ದಿದ್ದರೆ ಆರ್ಜಿಹಳ್ಳಿ ನಾಗರಾಜ ದೇವರ ತಲೆ ಮೇಲೆ ಕುಳಿತಿರುತ್ತಿದ್ದ !

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ತರಗತಿಗಳಿಂದ ತರ್ಕ ಪ್ರಪಂಚದೆಡೆ

ಅವಲೋಕನ

ಡಾ.ಡಿ.ಸಿ. ನಂಜುಂಡ
anthroedit@ymail.com

ಭಾರತ ಸ್ವತಂತ್ರಗೊಂಡ ನಂತರ ಇದುವರೆಗೂ ಮೂರು ರಾಷ್ಟ್ರೀಯ ಶಿಕ್ಷಣ ಆಯೋಗಗಳು ರಚನೆಗೊಂಡಿದ್ದು ಇದರ ಸಾಲಿಗೆ ಕಸ್ತೂರಿರಂಗನ್ ನೇತೃತ್ವದ 4ನೇ ಶಿಕ್ಷಣ ಆಯೋಗದ ವರದಿಯನ್ನು ಕೇಂದ್ರ ಸರಕಾರವು ಅಂಗೀಕರಿಸಿದ್ದು ಶೈಕ್ಷಣಿಕ ವಲಯದಲ್ಲಿ ಸಂಚಲನ ಮೂಡಿಸಿದೆ. 1986ರಲ್ಲಿ ಶಿಕ್ಷಣ ನೀತಿ ತರಲಾಗಿತ್ತು ಮತ್ತು ಮುಂದೆ 1992ರಲ್ಲಿ ಅದನ್ನು ಮಾರ್ಪಾಡು ಮಾಡಲಾಗಿತ್ತು. ಮೊದಲ ಮೂರು ಆಯೋಗಗಳು ನೀಡಿದ ವರದಿಯ ಜಾರಿ ಎಷ್ಟರಮಟ್ಟಿಗೆ ಯಶಸ್ಸು ಕಂಡಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಈಗಿರುವ ವ್ಯವಸ್ಥೆಯನ್ನು ಅಮೂಲಗ್ರವಾಗಿ ಬದಲಾಯಿಸುವ ಇರಾದೆ ಹೊಂದಿದೆ. ಹೊಸ ಶಿಕ್ಷಣ ವ್ಯವಸ್ಥೆಯ ಅನ್ವಯ ಇನ್ನು ಮುಂದೆ ದೇಶದಲ್ಲಿ 10+2 ಬದಲಾಗಿ 5+3+3+4 ಎಂಬ ನೂತನ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತಿದೆ. ಇದರೊಂದಿಗೆ 34 ವರ್ಷದ ದೇಶದ ಶಿಕ್ಷಣ ವ್ಯವಸ್ಥೆಯನ್ನು ಮರು ವ್ಯಾಖ್ಯಾನಿಸಲಾಗಿದೆ. ಇದರ ಅರ್ಥ ಶಾಲೆಯ ಮೊದಲ ಐದು ವರ್ಷಗಳು ಅಡಿಪಾಯ, ನಂತರದ ಮೂರು ವರ್ಷಗಳನ್ನು ಪೂರ್ವಸಿದ್ಧತಾ, ನಂತರದ ಮೂರು ವರ್ಷಗಳು ಮಧ್ಯಮ ಹಂತವನ್ನಾಗಿ ವಿಂಗಡಿಸಲಾಗಿದೆ. ಕೊನೆಗೆ ಉಳಿಯುವ 4 ವರ್ಷಗಳನ್ನು ವಿದ್ಯಾರ್ಥಿಯ ವೃತ್ತಿ ಬದುಕನ್ನು ನಿರ್ಧರಿಸುವ

ದ್ವಿತೀಯ ಹಂತವನ್ನಾಗಿ ಮಾರ್ಪಾಡು ಮಾಡಲಾಗಿದೆ. ತುಂಬಾ ಸೂಕ್ಷ್ಮವಾಗಿ ಗಮನಿಸಿದರೆ 10+2 ಮತ್ತು ಹೊಸ ವ್ಯವಸ್ಥೆಗೂ ಯಾವುದೇ ದೊಡ್ಡ ವ್ಯತ್ಯಾಸವಿಲ್ಲ!. ಹೊಸ ನೀತಿಯಲ್ಲಿ ಪ್ರತಿ ಮಗುವಿಗೂ ಮೊದಲ ಮೂರು ವರ್ಷದ ಅಂಗನವಾಡಿ/ ಪ್ರೀ ಸ್ಕೂಲ್ ಶಿಕ್ಷಣ ಕಡ್ಡಾಯ. ಹೊಸ ಶಿಕ್ಷಣ ನೀತಿ ಅನ್ವಯ ಇನ್ನುಮುಂದೆ ಮಕ್ಕಳಿಗೆ ಅಂಗನವಾಡಿಯಿಂದ 5ನೇ ತರಗತಿಯವರೆಗೆ ಮಾತೃಭಾಷೆಯಲ್ಲಿ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡಲು ಸೂಚಿಸಲಾಗಿದೆ. ಆದರೆ ಇದು ಕಡ್ಡಾಯವಲ್ಲ. ಈ ಒಂದು ನಿಯಮ ಎಷ್ಟರಮಟ್ಟಿಗೆ ಜಾರಿಗೆ ಬರುತ್ತದೆ ಎಂಬುದನ್ನು ಸಮಯವೇ ಹೇಳಬೇಕು. ಇನ್ನು ಮುಂದೆ ವಿದ್ಯಾರ್ಥಿಯ ಮೌಲ್ಯಮಾಪನ ಹೊಸ ಸ್ವರೂಪವನ್ನು ಪಡೆಯಲಿದೆ. ವಿಷಯವಾರು ಕಲಿಕೆಯೊಂದಿಗೆ ಜೀವನ ಕೌಶಲ್ಯವನ್ನು ಕಲಿಸಲು ಹೊಸ ನಿಯಮದಲ್ಲಿ ಜಾಗ ಕೊಡಲಾಗಿದೆ. 2035ರ ವೇಳೆಗೆ ಪ್ರೌಢಶಾಲೆ ಮುಗಿಸಿರುವ ಕನಿಷ್ಠ ಶೇಕಡ 50 ಮಕ್ಕಳಿಗೆ ಗುಣಾತ್ಮಕ ಉನ್ನತ ಶಿಕ್ಷಣ ದೊರಕಿಸುವ ಗುರಿಯನ್ನು ಇರಿಸಿಕೊಳ್ಳಲಾಗಿದೆ. ಆದರೆ ತಜ್ಞರ ಪ್ರಕಾರ ಈ ಗುರಿ ತಲುಪುವುದು ಸದ್ಯದ ಸ್ಥಿತಿಯಲ್ಲಿ ಅಸಾಧ್ಯವೇ ಸರಿ. ವಿದ್ಯಾರ್ಥಿಗಳ ಪ್ರಗತಿ ಪತ್ರಗಳಲ್ಲಿ ಅಂಕಗಳು ಮತ್ತು ಟಿಪ್ಪಣಿಗಳ ಬದಲಾಗಿ ಕೌಶಲಗಳ ವರದಿಯನ್ನು ನಮೂದಿಸಲು ಹೊಸ ನೀತಿಯಲ್ಲಿ ಸೂಚಿಸಲಾಗಿದೆ. ಇದರಿಂದ ಮುಂದೆ ವಿದ್ಯಾರ್ಥಿಯು ಯಾವ ಭಾಗದ ಶಿಕ್ಷಣವನ್ನು ಕೈಗೊಳ್ಳಬೇಕು ಅಥವಾ ಯಾವ ವೃತ್ತಿಪರ ಕೋರ್ಸ್ ತೆಗೆದುಕೊಂಡರೆ ಜೀವನದಲ್ಲಿ ಆತ ಯಶಸ್ಸು ಕಾಣಬಲ್ಲ ಎಂಬುದನ್ನು ಮುಂಚಿತವಾಗಿ ತಿಳಿದುಕೊಳ್ಳಬಹುದು. ಇನ್ನು ಮುಂದೆ 6ನೇ ತರಗತಿಯ ನಂತರದ ಪಠ್ಯಪುಸ್ತಕಗಳಲ್ಲಿ ವೃತ್ತಿ ಆಧಾರಿತ ವಿಚಾರಗಳನ್ನು ಹೆಚ್ಚಾಗಿ ಸೇರಿಸಲು ತಜ್ಞರು ಈ ನೀತಿಯ ಮೂಲಕ ಯಶಸ್ವಿಯಾಗಿದ್ದಾರೆ.

ಹೊಸ ಶಿಕ್ಷಣ ನೀತಿಯಲ್ಲಿ ಶಾಲೆ ಬಿಟ್ಟ ಸುಮಾರು 2.5 ಕೋಟಿ ಮಕ್ಕಳನ್ನು ಶಾಲೆಗೆ ಕರೆತರುವ ಯೋಜನೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. 2030ರ ವೇಳೆಗೆ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆಯ ಒಟ್ಟು ದಾಖಲಾತಿಯನ್ನು ಶೇಕಡ ನೂರಕ್ಕೆ ತಲುಪಿಸುವ ಹೊಣೆಗಾರಿಕೆಯನ್ನು ಶಿಕ್ಷಕರಿಗೆ ನೀಡಲಾಗಿದೆ. ಈ ಹೊಸ ನೀತಿಯ ಬಹುಮುಖ್ಯ ಅಂಶವೆಂದರೆ ಪ್ರತಿವರ್ಷ ವಿದ್ಯಾರ್ಥಿಯ ಕಲಿಕೆಯ ಗ್ರಾಫನ್ನು ಕಂಡುಕೊಳ್ಳಲು ಮತ್ತು ಕಲಿಕೆಯ ವೇಗವನ್ನು ಹೆಚ್ಚಿಸಲು ನಿರಂತರವಾಗಿ ವರ್ಷಪೂರ್ತಿ ಟ್ರ್ಯಾಕ್ ಮಾಡುವ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತಿದೆ. ಈ ವ್ಯವಸ್ಥೆ ಈಗಾಗಲೇ ಅಮೆರಿಕ ಮತ್ತು ಯುರೋಪ್ ದೇಶಗಳಲ್ಲಿದ್ದು ಅಲ್ಲಿ ಒಂದು ಹಂತದವರೆಗೆ ಯಶಸ್ಸು ಕಂಡಿದೆ. ಆದರೆ ಈ ವ್ಯವಸ್ಥೆಯನ್ನು ಭಾರತದಲ್ಲಿ ಗ್ರಾಮೀಣ ಮತ್ತು ಬುಡಕಟ್ಟು ಶೈಕ್ಷಣಿಕ ವ್ಯವಸ್ಥೆಯಲ್ಲಿ ಹೇಗೆ ಜಾರಿಗೆ ತರಲಾಗುವುದು ಎಂಬುದನ್ನು ತಜ್ಞರು ಮುಂದಿನ ದಿನಗಳಲ್ಲಿ ಉತ್ತರಿಸಬೇಕಾಗುತ್ತದೆ. ಪ್ರೌಢಶಿಕ್ಷಣ ಹಂತದಲ್ಲಿ ಒಂದು ದೇಶಿ ಭಾಷೆಯನ್ನು ಸಹ ಕಲಿಯಲು ಅವಕಾಶ ನೀಡಲಾಗುತ್ತಿದೆ. ಶ್ರವಣ ದೋಷದ ವಿದ್ಯಾರ್ಥಿಗಳಿಗೆ 'ಭಾರತೀಯ ಸಂಕೇತ ಭಾಷೆಯನ್ನು' ಪರಿಚಯಿಸಲಾಗುತ್ತಿದೆ. ಪ್ರಾದೇಶಿಕ ಭಾಷೆಗಳಲ್ಲಿ ಇ- ಕೋರ್ಸುಗಳನ್ನು ಅಭಿವೃದ್ಧಿಪಡಿಸುವುದು, ವರ್ಚುಯಲ್ ಪ್ರಯೋಗ ಶಾಲೆಗಳ ಸ್ಥಾಪನೆ ಸಹ ಈ ಹೊಸ ನೀತಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಇದೆಲ್ಲಾ ಕಂಪ್ಯೂಟರ್ ತಂತ್ರಜ್ಞಾನ ಆಧಾರಿತವಾಗಿದ್ದು ತನ್ನದೇ ಆದ ಕೆಲವು ಸಮಸ್ಯೆಗಳನ್ನು ಹೊಂದಿದೆ. ಇನ್ನು ಮುಂದೆ ಕಲಿಕೆಯನ್ನು ಅನ್ವಯಿಸಿದರೆ ಆಧಾರದ ಮೇಲೆ ಬೋರ್ಡ್ ಪರೀಕ್ಷೆಗಳು ನಡೆಯುತ್ತವೆ ಎಂಬುದನ್ನು ಸರಕಾರ ತನ್ನ ನೀತಿಯಲ್ಲಿ ತಿಳಿಸಿದೆ. ಪ್ರತಿವರ್ಷ ನಡೆಯುವ ಪರೀಕ್ಷೆ ಪದ್ಧತಿಯನ್ನು ಕೈ ಬಿಡಲಾಗಿದ್ದು ನಿರ್ಣಾಯಕ ಹಂತಗಳಲ್ಲಿ ಮಾತ್ರ ಅಂದರೆ 5, 8 10 ಮತ್ತು 12ನೇ ತರಗತಿಯ ಕೊನೆಯಲ್ಲಿ ಮಾತ್ರ ಪರೀಕ್ಷೆ ನಡೆಸಲು ಆಲೋಚಿಸಲಾಗಿದೆ. ಆದರೆ ಪರೀಕ್ಷೆ ಮಾಡದೆ ಉಳಿದ ತರಗತಿಗಳಿಂದ ಮುಂದಿನ ತರಗತಿಗಳಿಗೆ ಉತ್ತೀರ್ಣಗೊಳಿಸುವುದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ಬರುವ ದಿನಗಳು ಹೇಳಬೇಕಾಗಿದೆ. ಕರ್ನಾಟಕ ರಾಜ್ಯ ಸರಕಾರ ಕೆಲವು ವರ್ಷಗಳ ಹಿಂದೆ ಈ ರೀತಿಯ ನಿಯಮ ಜಾರಿಗೆ ತಂದು ಅದನ್ನು ಕೊನೆಗೆ ಕೈ ಬಿಟ್ಟಿರುವುದನ್ನು ನೆನಪಿಸಿಕೊಳ್ಳಬಹುದು.

ಹೊಸ ನೀತಿಯ ಇನ್ನೊಂದು ಮುಖ್ಯ ಭಾಗವೆಂದರೆ ಉನ್ನತ ಶಿಕ್ಷಣದಲ್ಲಿ ಕೆಲವು ಸುಧಾರಣಾ ವ್ಯವಸ್ಥೆಯನ್ನು ತರಲು ಸರಕಾರ ಮುಂದಾಗಿದೆ. ಇದರನ್ವಯ ಇನ್ನುಮುಂದೆ ವಿಶ್ವವಿದ್ಯಾಲಯಗಳ ನಿಯಂತ್ರಿಸುವ ಅಧಿಕಾರವನ್ನು ಯುಜಿಸಿಯ ಬದಲಾಗಿ ರಾಷ್ಟ್ರೀಯ ಉನ್ನತ ಶಿಕ್ಷಣದ ಆಯೋಗಕ್ಕೆ ನೀಡಲಾಗಿದೆ. ಇಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಕೇವಲ ಸಂಸ್ಥೆಯ ಹೆಸರನ್ನು ಮಾತ್ರ ಬದಲಾಯಿಸಲಾಗಿದೆ ಅಷ್ಟೇ. ಇದುವರೆಗೆ ಯುಜಿಸಿ ಮಾಡುತ್ತಿದ್ದ ಎಲ್ಲಾ ಕೆಲಸವನ್ನು ಇನ್ನು ಮುಂದೆ ಹೊಸ ಆಯೋಗ ಮಾಡಲಿದೆ. ಇನ್ನು ಮುಂದೆ ಹಂತ ಹಂತವಾಗಿ ದೇಶದ ಎಲ್ಲ ಪದವಿ ಕಾಲೇಜುಗಳಿಗೆ ಸ್ವಾಯತ್ತತೆ ನೀಡಲು ಯೋಚಿಸಲಾಗಿದೆ. ಆದರೆ ಈಗಾಗಲೇ ಸ್ವಾಯತ್ತತೆ ನೀಡಿರುವ ಕಾಲೇಜುಗಳ ಬೋಧನೆ, ಗುಣಮಟ್ಟ ಅಲ್ಲಿಂದ ಹೊರಬರುತ್ತಿರುವ ವಿದ್ಯಾರ್ಥಿಗಳ ಅರ್ಹತೆಗಳು ಪ್ರಶ್ನಾರ್ಹವಾಗಿದೆ. ಎಲ್ಲ ಪದವಿ ಕಾಲೇಜುಗಳಿಗೆ ಸ್ವಾಯತ್ತತೆ ನೀಡಿದರೆ ಅವುಗಳು ಅಂಕುಶವಿಲ್ಲದ ಆನೆಗಳಂತೆ ವರ್ತಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಹೊಸ ನೀತಿಯನ್ವಯ ಉನ್ನತ ಶಿಕ್ಷಣದಲ್ಲಿ ಸುಮಾರು ಹೆಚ್ಚುವರಿಯಾಗಿ 3.56 ಕೋಟಿ ಸೀಟುಗಳನ್ನು ಸೃಷ್ಟಿಸುವುದಕ್ಕೆ ಸರಕಾರ ಮನಸ್ಸು ಮಾಡಿದೆ. ಇನ್ನು ಮುಂದೆ ವಿಶ್ವವಿದ್ಯಾಲಯಗಳಿಗೆ ಇನ್ನೂ ಹೆಚ್ಚಿನ ಶೈಕ್ಷಣಿಕ ಮತ್ತು ಹಣಕಾಸಿನ ಸ್ವಾಯತ್ತತೆಯನ್ನು ನೀಡಲು ನಿರ್ಧರಿಸಲಾಗಿದೆ. ಆದರೆ ಈಗಾಗಲೇ ನೀಡಿರುವ ಸ್ವಾಯತ್ತತೆಯನ್ನು ದುರ್ಬಳಕೆ ಮಾಡಿಕೊಂಡು ಎಷ್ಟು ಜನಗಳು ಹೆಸರು ಕೆಡಿಸಿಕೊಂಡಿರುವುದನ್ನು ನಾವಿಲ್ಲಿ ಮರೆಯಬಾರದು. ಇಂದು ದೇಶದ ಹೆಚ್ಚಿನ ಜನಗಳ ಮೇಲೆ ಹಣಕಾಸಿನ ಮತ್ತು ನೇಮಕಾತಿ ಅಕ್ರಮಗಳ ತೂಗುಗತ್ತಿ ನೇತಾಡುತ್ತಿದೆ. ಈ ನೀತಿಯ ಅನ್ವಯ ಅತ್ಯುತ್ತಮ ಸಾಧನೆ ಮಾಡಿರುವ ದೇಶೀಯ ವಿಶ್ವವಿದ್ಯಾಲಯಗಳು ದೇಶದಲ್ಲಿ ಕ್ಯಾಂಪಸ್‌ಗಳನ್ನು ತೆಗೆಯಲು ಅವಕಾಶ ನೀಡಲಾಗುತ್ತಿದೆ. ಅದೇರೀತಿ ಪ್ರಸಿದ್ಧ ದೇಶಿ ವಿಶ್ವವಿದ್ಯಾಲಯಗಳು ದೇಶದಲ್ಲಿ ಕ್ಯಾಂಪಸ್ ತೆರೆಯಲು ಅವಕಾಶ ನೀಡಲಾಗುತ್ತಿದೆ. ಆದರೆ ಇದರಿಂದ ದೇಶೀಯ ವಿಶ್ವವಿದ್ಯಾಲಯಗಳ ಮೇಲೆ ಆಗುವ ಪರಿಣಾಮ ಕುರಿತು ಯಾರೂ ಯೋಚಿಸು ತ್ತಿಲ್ಲ.

ಇನ್ನು ಮುಂದೆ ದೇಶದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ಏಕೀಕೃತ ಕಮಾಂಡ್ ವ್ಯವಸ್ಥೆ ಜಾರಿಗೆ ತರಲು ನಿರ್ಧರಿಸಲಾಗಿದೆ. ಪ್ರಸ್ತುತ ದೇಶದಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳಿದ್ದು ಇವುಗಳಿಗೆ ಪ್ರತ್ಯೇಕ ನಿಯಮಗಳು ಜಾರಿಯಲ್ಲಿದೆ. ಆದರೆ ಇನ್ನು ಮುಂದೆ ಈ ಎಲ್ಲಾ ರೀತಿಯ ವಿಶ್ವವಿದ್ಯಾಲಯಗಳಿಗೆ ಏಕರೂಪದ ನಿಯಮಗಳನ್ನು ಜಾರಿಗೆ ತರುವುದರ ಕುರಿತು ಪ್ರಸ್ತಾಪಿಸಲಾಗಿದೆ. ದೇಶದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಏಕರೂಪ ಪ್ರವೇಶ ಪರೀಕ್ಷೆಯನ್ನು ಜಾರಿಗೆ ತರುವ ಕುರಿತು ಚಿಂತಿಸಲಾಗುತ್ತಿದೆ. ಆದರೆ ಇದು ಕೆಲವೊಂದು ತಾಂತ್ರಿಕ ಸಮಸ್ಯೆಗಳನ್ನು ಮುಂದಿನ ದಿನಗಳಲ್ಲಿ ಉಂಟುಮಾಡುವುದರಲ್ಲಿ ಅನುಮಾನವಿಲ್ಲ. ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆಯನ್ನು ರೂಪಿಸಲಾಗುತ್ತಿದ್ದು ಇದರ ಅನ್ವಯ ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಮಾಡಬಹುದಾದ ಕ್ರಾಂತಿಕಾರಿ ಬದಲಾವಣೆಗಳ ಕುರಿತು ಸಂಶೋಧನೆ ಮಾಡುವುದು ಮತ್ತು ಅದನ್ನು ದೇಶದ ಎಲ್ಲಾ ಶಿಕ್ಷಣ ಸಂಸ್ಥೆಗಳೊಂದಿಗೆ ಹಂಚಿಕೊಳ್ಳುವ ಯೋಜನೆ ರೂಪಿಸಲಾಗಿದೆ . ಇನ್ನು ಮುಂದೆ ದೇಶದಲ್ಲಿ ಎಂಫಿಲ್ ಪದವಿಯನ್ನು ರದ್ದುಪಡಿಸಲಾಗುವುದು. ಆದರೆ ಇದರ ಹಿಂದಿನ ತರ್ಕದ ಬಗ್ಗೆ ಯಾರೂ ಹೇಳುತ್ತಿಲ್ಲ. ಪಿಎಚ್. ಡಿ ಪದವಿ ಇಲ್ಲದವರಿಗೆ ಎಂಫಿಲ್ ಪದವಿ ಒಂದು ಅವಕಾಶ ನೀಡುತ್ತಿತ್ತು. ಸ್ನಾತಕೋತ್ತರ ಪದವಿ ಪಡೆದ ನಂತರ ನೇರವಾಗಿ ಪಿಎಚ್.ಡಿಗೆ ಹೋಗುವುದರ ಬದಲಾಗಿ ಎಂಫಿಲ್ ಪದವಿ ಪಡೆದ ನಂತರ ಪಿಎಚ್.ಡಿಗೆ ದಾಖಲಾದರೆ ಸಂಶೋಧನೆಯ ಗುಣಮಟ್ಟ ಹೆಚ್ಚಾಗುತ್ತದೆ ಎಂಬುದು ತಜ್ಞರ ವಾದ. 2021ರ ಜೂನ್ ನಂತರ ಎಲ್ಲಾ ಪದವಿ ಮತ್ತು ವಿಶ್ವವಿದ್ಯಾಲಯದ ಅಧ್ಯಾಪಕರುಗಳಿಗೆ ಪಿಎಚ್.ಡಿ ಪದವಿ ಕಡ್ಡಾಯವಾಗಲಿದೆ. ಇನ್ನು ಮುಂದೆ ಸಂಶೋಧನಾ ಯೋಜನೆಗಳಿಗೆ ಹಣಕಾಸಿನ ಸೌಲಭ್ಯ ನೀಡಲು ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಎಂಬ ಏಕರೂಪ ಯೋಜನೆ ಜಾರಿಗೆ ತರಲಾಗಿದೆ. ಸುಭದ್ರ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರದ ರಾಷ್ಟ್ರೀಯ ಮಿಷನ್ ಸ್ಥಾಪಿಸಲು ಆಯೋಜಿಸಲಾಗಿದೆ. ರಾಷ್ಟ್ರೀಯ ಪುಸ್ತಕ ನೀತಿಯನ್ನು ಜಾರಿಗೆ ತರಲು ಯೋಜಿಸಲಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಹೊಸ ಶಿಕ್ಷಣ ನೀತಿಯಲ್ಲಿ ಒಳಗೊಳ್ಳುವಿಕೆಯ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ.

ಹೊಸ ಶಿಕ್ಷಣ ನೀತಿ ಸಾಕಷ್ಟು ಕನಸುಗಳನ್ನು ಹೆಣೆದಿದ್ದರೂ ಸಹ ಅದರ ಜಾರಿ ಮುಂದೆ ಬರುವ ಸರಕಾರಗಳ ಮೇಲೆ ಮತ್ತು ಅಧಿಕಾರಿ ವರ್ಗದ ಮೇಲೆ ನಿಂತಿರುತ್ತದೆ ಎನ್ನುವುದನ್ನು ಮರೆಯಬಾರದು. ಭಾರತ ಒಂದು ಬಹುತ್ವದ ಆಧಾರದ ಮೇಲೆ ನಿಂತಿರುವ ದೇಶವಾಗಿದ್ದು ಇಲ್ಲಿ ವಿವಿಧ ಭಾಷೆ, ಸಂಸ್ಕೃತಿ, ಪ್ರಾದೇಶಿಕತೆ, ಗ್ರಾಮೀಣ, ಬುಡಕಟ್ಟು ಮುಂತಾದ ಅಂಶಗಳು ಶಿಕ್ಷಣದಲ್ಲಿ ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಮುಖ್ಯವಾಗಿ ಈ ನೀತಿಯಿಂದ ಕ್ರಮೇಣ ರಾಜ್ಯ ಸರಕಾರಗಳು ಶಿಕ್ಷಣದ ವಿಚಾರದಲ್ಲಿ ತಮ್ಮ ಹಿಡಿತ ಕಳೆದುಕೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ ಎನ್ನುತ್ತಾರೆ ಕೆಲವು ತಜ್ಞರು.